# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.34/2019

PW-04

CW-05

| | |
|---|---|
| ಸಾಕ್ಷಿದಾರರ ಹೆಸರುಃ | ಕಸ್ತೂರೆವ್ವ ರಿತ್ತಿ |
| ತಂದೆಃಗಂಡನ ಹೆಸರುಃ | ಮಲ್ಲಪ್ಪ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಹಿರೇಮರಳಿಹಳ್ಳಿ |

ದಿನಾಂಕ:04.12.2021 ರಂದು ಸಾಕ್ಷಿ ಹಾಜರಿದ್ದು , ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನನಗೆ ಆರೋಪಿತರ, ಚಾಸಾ-1, 4, 6 ರಿಂದ 9 ರವರ ಪರಿಚಯ ಇದೆ. ಆರೋಪಿತರು ನಮಗೆ ಬೈಯುವುದಾಗಲೀ, ಹಲ್ಲೆ ಮಾಡುವುದಾಗಲೀ ಅಥವಾ ಜಾತಿ ನಿಂದನೆ ಮಾಡುವುದಾಗಲೀ, ಕೊಲೆ ಮಾಡುವ ಪ್ರಯತ್ನವಾಗಲೀ ಅಥವಾ ಜೀವ ಬೆದರಿಕೆ ಹಾಕುವುದಾಗಲೀ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ, ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ30.07.2019 ರಂದು ಬೆಳಿಗ್ಗೆ 11.30 ಗಂಟೆಗೆ ನಾವೆಲ್ಲರೂ ಪಂಚಾಯತಿ ಕಚೇರಿ ಮುಂದೆ ಧರಣಿ ಮಾಡುತ್ತಿದ್ದಾಗ ಆರೋಪಿತರು ಹಿರೇಮರಳೀಹಳ್ಳಿ ಗ್ರಾಮ ಠಾಣಾ ಸರ್ವೆ ನಂ.152 ಹಾಗು 153 ಕ್ಕೆ ಸಂಬಂಧಿಸಿದಂತೆ ನಮ್ಮೊಂದಿಗೆ ಗುಂಪುಕಟ್ಟಿಕೊಂಡು ಬಂದು ನಮಗೆ ಜಾತಿ ಹಿಡಿದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆಗ ಚಾಸಾ-1 ಬುದ್ದಿಹೇಳಿದ್ದಕ್ಕೆ ಆರೋಪಿತರು ಆಕೆಗೆ ಲೇ ಮಾದರ ಕೀಳು ಜಾತಿ ಬೋಸುಡಿ ನಮಗೆ ಬುದ್ದಿ ಹೇಳುವಷ್ಟು ದೊಡ್ಡಾಕಿ ಆಗಿದ್ದೀಯೇನೋ ಎಂದು ಬೈದಾಡಿ ಜಾತಿ ನಿಂದನೆ ಮಾಡಿದ್ದಲ್ಲದೇ, ಆರೋಪಿ 1 ರಿಂದ 4 ರವರು ಚಾಸಾ-1ರವರ ಸೊಂಟ ಹಿಡಿದು ನೆಲಕ್ಕೆ

ಕೆಡವಿ ಸೀರೆ ಜಗ್ಗಿ, ಕಪಾಳಕ್ಕೆ , ಪಕ್ಕೆಗೆ ಬಲವಾಗಿ ಹೊಡೆದು ಅವಮಾನಮಾಡಿದ್ದು, ಆ ಸಮಯದಲ್ಲಿ ಬಿಡಿಸಿಕೊಳ್ಳಲು ಹೋದ ನನಗೆ, ಚಾಸಾ-4, 6 ರವರಿಗೆ ಲೇ ಕೀಳು ಜಾತಿ ಬೋಸುಡೇರಾ ಎಂದು ಜಾತಿ ನಿಂದನೆ ಮಾಡಿ ನಂತರ ಆರೋಪಿ 5, 6 ರವರು ನನಗೆ, ಚಾಸಾ-4, 6 ರವರನ್ನು ಎಳೆದು ಬೀಳಿಸಿ ಬಿಡಿಸಿಕೊಳ್ಳಲು ಹೋದ ಚಾಸಾ-7 ರಿಂದ 9 ರವರಿಗೆ ಎಲ್ಲಾ ಆರೋಪಿತರು ಸೇರಿಕೊಂಡು ನೆಲಕ್ಕೆ ಕೆಡವಿ ಕುತ್ತಿಗೆ ಹಿಚುಕಿ ಹೊಲೆ ಮಾಡಲು ಯತ್ನಿಸಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮೇಲೆ ಹೇಳಿದಂತೆ ಪೊಲೀಸರಿಗೆ ದಿನಾಂಕಃ01.08.2019 ರಂದು ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿಪಿ-7 ಕ್ಕೆ ಗುರ್ತಿಸಲಾಯ್ತು. ನಿಪಿ-7 ರಂತೆ ಹೇಳಿಕೆ ನೀಡಿದ್ದರೂ ಸಹ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿ.ವಿ.ಎಸ್ ವಕೀಲರಿಂದಃ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಈ. ರಾಜೀವ ಗೌಡ)

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.

ಸಂಜೆ 4.00 ರಿಂದ 5.00 ಗಂಟೆ ನಡುವೆ 2 ನೇ ಆರೋಪಿ ತೋರಿಸಿದ ಆತನ ಮನೆಯ ಸ್ಥಳವನ್ನು ಪೊಲೀಸರು ಪರಿಶೀಲಿಸಿ ನನ್ನ ಮತ್ತು ಚಾಸಾ-5 ಸಮಕ್ಷಮ ಪಂಚನಾಮೆ ಮಾಡಿ ಫೋಟೋ ತೆಗೆಸಿ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ನಿಪಿ-5 ರಲ್ಲಿರುವ ಸಂಗತಿಯಲ್ಲಿರುವ ಸಂಗತಿಗಳು ನನಗೆಲ್ಲಾ ಗೊತ್ತಿದ್ದರೂ ಸಹ ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ ವಕೀಲರಿಂದಃ ಆರೋಪಿತರ ಪರ ವಕೀಲರು ಈ ಸಾಕ್ಷಿಗೆ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಈ. ರಾಜೀವ ಗೌಡ)

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.